ಕರ್ನಾಟಕ ಸರ್ಕಾರ (ಸಿ.ಆರ್.ಪಿ.೬೭)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ ೫೭)<br>ನಮೂನೆ ಸಂಖ್ಯೆ ೪<br>(ಸಿವಿಲ್) |

## ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

**ಎಸ್.ಸಿ.ಸಂಖ್ಯೆ: ೫೪/೨೦೦೮**

**ಪ್ರಾಸಾ ೦೨**

**ಚಾಸಾ ೦೪**

ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕಃ ೦೪/೦೬/೨೦೧೬

| | | |
|---|---|---|
| **ಸಾಕ್ಷಿಯ ಹೆಸರು** | : | ಸಿ.ಆಂಜಪ್ಪ |
| **ತಂದೆ/ಗಂಡನ ಹೆಸರು** | : | ಚಿಕ್ಕವೆಂಕಟಪ್ಪ |
| **ವಯಸ್ಸು** | : | ೪೪ ವರ್ಷ |
| **ಉದ್ಯೋಗ** | : | ಹಿರಿಯ ಪೋಲಿಸ್ ಪೇದೆ ಸಂಃ೮೯ |
| **ವಾಸಸ್ಥಳ** | : | ಶ್ರೀನಿವಾಸಪುರ |

**ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ ಸಂಃ ೨೯೯ರಡಿಯಲ್ಲಿನ ಸಾಕ್ಷಿಃ**

**ಮುಖ್ಯ ವಿಚಾರಣೆ:** ಸರ್ಕಾರಿ ಅಭಿಯೋಜಕರು ಕರ್ತವ್ಯದ ಮೇಲೆ ಕಾರಣ ಸಾಕ್ಷಿಯ ಸ್ವತಃ ಮುಖ್ಯ ವಿಚಾರಣೆಃ

೧೯೯೬ರಿಂದ ೨೦೦೪ರವರೆಗೆ ಗೌರಿಬಿದನೂರು ಪುರ ಠಾಣೆಯಲ್ಲಿ ಪೋಲಿಸ್ ಪೇದೆ ಸಂಃ ೨೯೩ ಎಂದು ಕಾರ್ಯ ನಿರ್ವಹಿಸಿದ್ದೇನೆ.

ದಿಃ೨೦/೩/೨೦೦೨ರಂದು ಬೆಳಿಗ್ಗೆ ೧೦ ರಿಂದ ಮ. ೨ಗಂಟೆಯವರೆಗೆ ಠಾಣಾ ಪಹರೆ ಕೆಲಸಕ್ಕೆ ನೇಮಿಸಲಾಗಿತ್ತು, ಬೆಳಿಗ್ಗೆ ೧೦-೪೫ರ ಸಮಯದಲ್ಲಿ ಗೌರಿಬಿದನೂರಿನ ವೃತ್ತನಿರೀಕ್ಷಕರು ನಿಸ್ತಂತು ಮೂಲಕ ಕಾರು ಸಂಃ ಕೆಎ-೦೨-ಎಂಎ-೮೦೦೮ ಬಿಳಿ ಬಣ್ಣದ ಮಾರ್ಟಿಸ್ ಕಾರು ಬರುತ್ತಿದೆ ಅದರಲ್ಲಿ ೩ ಜನ ವ್ಯಕ್ತಿಗಳು ಇದ್ದಾರೆ ಅದನ್ನು ತಡೆದು ನಿಲ್ಲಿಸುವಂತೆ ತಿಳಿಸಿದರು, ಸದರಿ ಕರ್ತವ್ಯದ ಕಾಲಕ್ಕೆ ನನ್ನ ಬಳಿ ರೈಫಲ್ ಬಟ್ ಸಂಃ೫೩೩ ಇತ್ತು, ಠಾಣಾ ಪ್ರಭಾರದಲ್ಲಿದ್ದ ಹಿರಿಯ ಪೋ.ಪೇದೆ ಸಂಃ೭೦ ಕೃಷ್ಣಮೂರ್ತಿ ಮತ್ತು ನಿಸ್ತಂತು ಕರ್ತವ್ಯದ ಮೇಲಿದ್ದ ಮಹಿಳಾ ಪೋ.ಪೇದೆ ಸಂಃ ೬೭೯ ಲಲಿತಮ್ಮರವರು ನನಗೆ ಠಾಣೆಯ ೀಮುಂಭಾಗದ ರಸ್ತೆಗೆ ಬರುವಂತೆ ತಿಳಿಸಿದರು, ನಂತರ ನಾವು ೩ ಜನ ಸೇರಿ ಠಾಣೆಯ ಮುಂಭಾಗದ ರಸ್ತೆಯಲ್ಲಿ ಕಾಯುತ್ತಿರುವ ಕಾಲಕ್ಕೆ ಸದರಿ ಕಾರು ಅಲ್ಲಿಗೆ ಅತಿಜೋರಾಗಿ ಬರುತ್ತಿತ್ತು, ಅದಕ್ಕೆ ನಿಲ್ಲಿಸುವಂತೆ ಸೂಚನೆ ಮಾಡಿದೆವು, ಸದರಿ ಕಾರಿನ ಚಾಲಕ ಕಾರನ್ನು ನಿಲ್ಲಿಸುವಂತೆ ನಟಿಸಿ ನನ್ನ ಸೊಂಟದ ಎಡಭಾಗಕ್ಕೆ ಕಾರನ್ನು ತಗುಲಿಸಿದ ಆಗ ನಾನು ನನ್ನ ಬಳಿ ಇದ್ದ ರೈಫಲ್ ಬಟ್‌ನಿಂದ ಸದರಿ ಕಾರಿನ ಮುಂಭಾಗದ ಗಾಜಿಗೆ ಹೊಡೆದು ಒಡೆದು ಹಾಕಿದೆ, ಆದರೂ ಸಹ ಕಾರನ್ನುನಿಲ್ಲಿಸದೇ ಹೊರಟು ಹೋದರು ತಕ್ಷಣ ನಾನು ಬಿದ್ದು ಹೋದೆ, ನಾನು ಬಿದ್ದಿದ್ದರಿಂದ ನನ್ನ

ಎಡಮೊಣಕೈ ಮತ್ತು ಎಡಗಾಲಿಗೆ ತರಚಿದ ಗಾಯಗಳಾಯಿತು, ಆ ಸಮಯಕ್ಕೆ ಹಿ.ಪೋ.ಪೇದೆ ಕೃಷ್ಣಮೂರ್ತಿ ನನ್ನ ಬಳಿ ಇದ್ದ ರೈಫಲ್‌ನ್ನು ತಮ್ಮ ವಶಕ್ಕೆ ಪಡೆದರು, ನಂತರ ಅಲ್ಲಿಯೇ ಇದ್ದ ಪಂಚರ್ ಅಂಗಡಿಯ ನಾಗರಾಜ್ ನನ್ನನ್ನು ಉಪಚರಿಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದರು. ನಂತರ ನಮ್ಮ ವೃತ್ತ ನಿರೀಕ್ಷಕರಾದ ಲೋಕೇಶ್ ಮತ್ತು ಹಿ.ಪೋ.ಪೇದೆ ಸಂಃ ೨೧೫ ವೆಂಕಟೇಶ್, ಹಿ.ಪೋ.ಪೇದೆ ಸಂಃ೪೭೯ ಪ್ರತಾಪ್ ಇವರು ಒಂದು ಖಾಸಗಿ ಕಾರಿನಲ್ಲಿ ಮುಂದೆ ಹೋದ ಕಾರನ್ನು ಹಿಂಬಾಲಿಸಿಕೊಂಡು ಹೋಗಿ ಮಂಚೇನಹಳ್ಳಿ ಬಳಿ ತಡೆದಿದ್ದಾರೆಂದು ನಂತರ ನನಗೆ ಕೇಳಿ ತಿಳಿಯಿತು, ಸದರಿ ಕಾರಿನಲ್ಲಿದ್ದ ಮಣಿಮಾರನ್, ಕಾರು ಚಾಲಕ ರವಿ ಮತ್ತು ಪ್ರವೀಣ್ ಸೇರಿ ಬಟನ್ ಚಾಕುವಿನಿಂದ ನಮ್ಮವರ ಮೇಲೆ ಕೊಲೆ ಪ್ರಯತ್ನ ಮಾಡಿದ್ದರೆಂದು ಕೂಡ ನಾನು ಕೇಳಿ ತಿಳಿದಿದ್ದೇನೆ, ಆ ಸಮಯದಲ್ಲಿ ವೃತ್ತ ನಿರೀಕ್ಷಕರಾದ ಲೋಕೇಶ್ ಇವರು ಸೇವಾ ರಿವಾಲ್ವರ್‌ನಿಂದ ಸದರಿಯವರ ಮೇಲೆ ಗುಂಡು ಹಾರಿಸಿದರೆಂದು ಕೇಳಿ ತಿಳಿದಿದೆ, ಆದರಿಂದ ಮಣಿಮಾರನ್‌ಗೆ ಗಾಯವಾಗಿದೆಂದು ಕೇಳಿ ತಿಳಿದಿದ್ದೇನೆ. ಸದರಿ ೩ ಜನರನ್ನುನೋಡಿದರೆ ಗುರುತಿಸುತ್ತೇನೆ. ಸದರಿ ವೃತ್ತನಿರೀಕ್ಷಕರು ಮತ್ತು ಪೋಲಿಸ್ ಸಿಬ್ಬಂದಿ

ಸದರಿ ಕಾರನ್ನು ಬೆನ್ನಟ್ಟಲು ಉಪಯೋಗಿಸಿದ ಖಾಸಗಿ ವಾಹನದ ಸಂಖ್ಯೆಯನ್ನು ಹೇಳಲು ನನಗೆ ಈಗ ನೆನಪಿಲ್ಲ.

**ಪಾಟೀಸವಾಲು: ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ ಸಂಃ ೨೯೯ರಡಿಯಲ್ಲಿನ ವಿಚಾರಣೆಯಾಗಿರುವುದರಿಂದ ಪಾ.ಸವಾಲು ಇಲ್ಲ.**

**ಮರು ವಿಚಾರಣೆ:** ಸರ್ಕಾರಿ ಅಭಿಯೋಜಕರು ಇಲ್ಲವೆಂದು ಹೇಳಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಗಾರ್ತಿಯಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ ಕೇ ಸರಿ ಇದೆ

ಒಂದನೇ ಹೆಚ್ಚುವರಿ ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.